**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1637/2020**

| | | |
|---|---|---|
| ಹೆಸರು | ಬಿ ಜಿ ಪ್ರಭುಗೌಡ | ಪಿಡಬ್ಲ್ಯೂ –01<br>ಸಿಡಬ್ಲ್ಯೂ – 01 |
| ತಂದೆಯ ಹೆಸರು | ಬಿ ಜಿ ವಾಮದೇವಪ್ಪ | |
| ವಯಸ್ಸು | 49 ವರ್ಷ | |
| ಉದ್ಯೋಗ | ಶಿಕ್ಷಕರು | ದಿ: 10.08.2023 |
| ವಾಸ ಸ್ಥಳ | ಹರಿಹರ | |
| ಮುಖ್ಯ ವಿಚಾರಣೆ | ಸಹಾಯಕ ಸರ್ಕಾರಿ ಅಭಿಯೋಜಕರಿಂದ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನಾನು ನೋಡಿರುತ್ತೇನೆ. ಚಾಸಾ–4 ನನ್ನ ಹೆಂಡತಿ. ಚಾಸಾ–5 ನನ್ನ ಸ್ನೇಹಿತ.

2. ದಿಃ 21.08.2020 ರಂದು ಮ.2.00 ಗಂಟೆ ಸಮಯದಲ್ಲಿ ಗಣೇಶ್ ಹಬ್ಬದ ಪ್ರಯುಕ್ತ ನಮ್ಮ ಸ್ವಂತ ಊರಾದ ಹರಪ್ಪನಹಳ್ಳಿ ತಾಲ್ಲೂಕಿನ ನಿಟ್ಟೂರು ಗ್ರಾಮಕ್ಕೆ ಕುಟುಂಬ ಸಮೇತರಾಗಿ ಮನೆಯನ್ನು ಬೀಗ ಹಾಕಿಕೊಂಡು ಹೋಗಿದ್ದು, ದಿಃ 22.08.2020 ರಂದು ಬೆಳಿಗ್ಗೆ 7.30 ರ ಸಮಯದಲ್ಲಿ ನನ್ನ ಸ್ನೇಹಿತ ದೇವರ ಪೂಜೆಗೆಂದು ಹೂವನ್ನು ತೆಗೆದುಕೊಳ್ಳಲು ನಮ್ಮ ಮನೆಗೆ ಬಂದಾಗ ನಮ್ಮ ಮನೆಯ ಎರಡು ಬಾಗಿಲುಗಳು ತೆರೆದಿದ್ದನ್ನು ನೋಡಿ, ನಾವು ಒಳಗೆ ಇದ್ದೇವೆಂದು ತಿಳಿದು, ಮಾತಾನಾಡಿಸಲು ಹೋಗಿದ್ದು, ಆದರೆ ನಾವು ಒಳಗೆ ಇಲ್ಲದ್ದನ್ನು ನೋಡಿ, ನಂತರ ನಮಗೆ ದೂರವಾಣಿ ಮೂಲಕ ಕರೆ ಮಾಡಿ, ನಮ್ಮ ಮನೆಯ ಎರಡು ಬಾಗಿಲು ತೆರೆದಿರುವುದಾಗಿ ಹೇಳಿರುತ್ತಾರೆ. ಆನಂತರ ನಾನು ಮತು ನನ್ನ ಅಣ್ಣ ಇಬ್ಬರೂ ಬೈಕ್ ಮೇಲೆ ನಿಟ್ಟೂರಿನಿಂದ ಬೆ.9.30 ರ ಸುಮಾರಿಗೆ ಮನೆಗೆ ಬಂದು, ನೋಡಲಾಗಿ ಮನೆಯ ಮುಖ್ಯ ದ್ವಾರದ ಎರಡು ಬಾಗಿಲುಗಳು ತೆರೆದಿದ್ದು, ನಂತರ ಒಳಗೆ ಹೋಗಿ ನೋಡಲಾಗಿ, ನಮ್ಮ ಎರಡನೇ ಬೆಡ್ ರೂಂನಲ್ಲಿ ಇಟ್ಟಿದ್ದ ಗಾಡ್ರೇಜ್ ಬಾಗಿಲು ತೆರೆದಿದ್ದು, ಅದರಲ್ಲಿ ಇಟ್ಟಿದ್ದ 3 ಬಂಗಾರದ ರಿಂಗ್ ಗಳು, ಒಂದು ಕಿವಿ ಓಲೆ (ಹ್ಯಾಂಗಿಗ್ ಸೆಟ್) ಹಾಗೂ ರೂ.5000/–ಗಳ ಹಣ ಕಾಣೆಯಾಗಿದ್ದವು. ನಂತರ ದೇವರ ಕೋಣೆಗೆ ಬಂದು ನೋಡಲಾಗಿ, ಡಬ್ಬಿಯಲ್ಲಿ ಇಟ್ಟಿದ್ದ ರೂ.300/–ರಿಂದ 400/– ನಾಣ್ಯಗಳು ಸಹ ಕಾಣೆಯಾಗಿದ್ದವು.

3. ನಂತರ ನಾವು ಪೊಲೀಸ್ ಠಾಣೆಗೆ ಹೋಗಿ ಮನೆಯಲ್ಲಿ ಕಳ್ಳತನವಾಗಿರುವ ಬಗ್ಗೆ ದೂರನ್ನು ಕೊಟ್ಟಿರುತ್ತೇವೆ. ಈಗ ನೋಡುತ್ತಿರುವ ದೂರಿನಲ್ಲಿರುವ ಸಹಿ ನನ್ನದು. ಸದರಿ ದೂರನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ದೂರನ್ನು ಕೊಟ್ಟ 2–3 ದಿನದ ನಂತರ ಪೊಲೀಸರು ನಮ್ಮ ಮನೆಗೆ ಬಂದು ಮಹಜರು ಮಾಡಿ, ಪೋಟೋಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಮಹಜರನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಪೋಟೋಗಳನ್ನು ನಿಪಿ–3 ಮತ್ತು 4 ಎಂದು ಗುರುತಿಸಲಾಯಿತು.

4. ಸುಮಾರು 7–8 ದಿನಗಳ ನಂತರ ಪೊಲೀಸರು ನಮ್ಮ ಮನೆ ಕಳ್ಳತನ ಮಾಡಿದ ಒಬ್ಬ ವ್ಯಕ್ತಿಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದು, ಆತನು ತೋರಿಸಿದಂತೆ ನಮ್ಮ ಮನೆಯ ಮುಂದುಗಡೆ ಬಾಗಿಲು ತೆರೆದ ಜಾಗದಲ್ಲಿ ಪೊಲೀಸರು ಮಹಜರು ಜರುಗಿಸಿರುತ್ತಾರೆ. ಈಗ ನೋಡುತ್ತಿರುವ ಪೋಟೋದಲ್ಲಿ ನಾನು ಇದ್ದೇನೆ. ಸದರಿ ಪೋಟೋವನ್ನು ನಿಪಿ–5 ಎಂದು ಗುರುತಿಸಲಾಯಿತು.

5. ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಸಿ,ನಮ್ಮ ಮನೆಯಲ್ಲಿ ಕಳ್ಳತನವಾದ ಒಡವೆಗಳನ್ನು ಗುರುತಿಸಲು ಹೇಳಿದ್ದು, ನಾನು ನೋಡಿ ಗುರುತಿಸಿರುತ್ತೇನೆ. ನಂತರ ನ್ಯಾಯಾಲಯದ ಆದೇಶವನ್ನು ಪಡೆದುಕೊಂಡು ಬಂದ ಮೇಲೆ ಸಾಮಾನುಗಳನ್ನು ಕೊಡುವುದಾಗಿ ಹೇಳಿದ್ದರಿಂದ ನಾನು ನ್ಯಾಯಾಲಯದಿಂದ ಸದರಿ ಸಾಮಾನಗಳ ಬಿಡುಗಡೆಗಾಗಿ ಆದೇಶ ಪಡೆದುಕೊಂಡು ಬಂದಿದ್ದು, ಪೊಲೀಸರು ಮಹಜರು ಮಾಡಿ, ನನಗೆ ಬಂಗಾರದ ಒಡವೆಗಳನ್ನು ಕೊಟ್ಟಿರುತ್ತಾರೆ. ಸದರಿ ಮಹಜರನ್ನು ನಿಪಿ–6 ಎಂದು, ಸಾಕ್ಷಿಯ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಪೋಟೋಗಳನ್ನು ನಿಪಿ–7 ಮತ್ತು 8 ಎಂದು ಗುರುತಿಸಲಾಯಿತು.

6. ನಮ್ಮ ಮನೆ ಕಳ್ಳತನವನ್ನು 3 ಜನ ಆರೋಪಿತರು ಸೇರಿ ಮಾಡಿರುತ್ತಾರೆ ಎಂದು ಪೊಲೀಸರಿಂದ ಕೇಳಿ ಗೊತ್ತಾಗಿರುತ್ತದೆ. ನಮ್ಮ ಮನೆಯ ಮಹಜರು ಕಾಲಕ್ಕೆ ಪೊಲೀಸರು ಕರೆದುಕೊಂಡು ಬಂದ ಆಸಾಮಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ ಏಕೆಂದರೆ ಆ ದಿನ ಮಾಸ್ಕ್ ನ್ನು ಧರಿಸಿಕೊಂಡಿದ್ದನು. ಸಾಕ್ಷಿಗೆ ನಿಪಿ–5 ರಲ್ಲಿರುವ ಪೋಟೋವನ್ನು ತೋರಿಸಲಾಗಿ ಅದರಲ್ಲಿರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಮ್ಮ ಮನೆಯಲ್ಲಿ ಕಳ್ಳತನವಾದ ಬಂಗಾರದ ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಸಾಕ್ಷಿಯು ಸದರಿ ಬಂಗಾರದ ಆಭರಣಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು,

ಸದರಿ ಆಭರಣಗಳು ನಿಪಿ-7ರ ಪೋಟೋದಲ್ಲಿ ಕಾಣಿಸುತ್ತಿರುವ ಆಭರಣಗಳು ಆಗಿರುತ್ತವೆ. ಸದರಿ ಆಭರಣಗಳನ್ನು ಸಾಕ್ಷಿಗೆ ಮರಳಿ ಕೊಡಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀಮತಿ ಎಸ್ ಪಿ ಎಸ್ ವಕೀಲರಿಂದಃ**

7. ಈ ಪ್ರಕರಣದ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಯನ್ನು ಮೊದಲನೇ ಬಾರಿಗೆ ಮಹಜರಿಗೆ ಬಂದಾಗ ನೋಡಿರುತ್ತೇನೆ. 1 ನೇ ಆರೋಪಿಯನ್ನು ಪೊಲೀಸರು ತೋರಿಸಿದ ಮೇರೆಗೆ ನನಗೆ ಗೊತ್ತಾಗಿರುತ್ತದೆ. ಆರೋಪಿತರು ನಮ್ಮ ಮನೆಯಲ್ಲಿ ಯಾವುದೇ ರೀತಿಯ ಕಳ್ಳತನ ಮಾಡದೇ ಇದ್ದರೂ ಸಹ ಪೊಲೀಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ಬಂಗಾರದ ಒಡವೆಗಳಿಗೂ ಹಾಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

8. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಸದರಿ ದಿನ ನಾವು ನಮ್ಮ ಊರಿಗೆ ಹೋದಾಗ ಚಾಸಾ-5 ರವರು ಫೋನ್ ಮಾಡಿ, ನಮ್ಮ ಮನೆ ಕಳ್ಳತನವಾದ ಬಗ್ಗೆ ತಿಳಿಸಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನಮಗೆ ಫೋನ್ ಮಾಡಿದ ಚಾಸಾ-5 ರವರ ಮೊಬೈಲ್ ನಂಬರ್ ಬರೆಸಿರುವುದಿಲ್ಲ ಎಂದರೆ ಸರಿ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಪೊಲೀಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದು, ಈ ಮುಂಚೆ ಆತನನ್ನು ನಾನು ಎಲ್ಲಿಯೂ ನೋಡಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ನಾನು ಮಹಜರು ಕಾಲದಲ್ಲಿ ನೋಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎನ್ ಎಲ್ ವಕೀಲರಿಂದಃ**

9. ನಾನು ರಾಜನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಎ.ಕೆ. ಕಾಲೋನಿಯಲ್ಲಿ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಚಾಸಾ-5 ರವರು ನನ್ನ ಸ್ನೇಹಿತರಾಗಿದ್ದು, ಅವರು ಸಹ ಬೆಳ್ಳೂಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಎಸ್ ಡಿ ಜೆ ಬಡಾವಣೆಯಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನನಗೆ ಹಾಗೂ ಚಾಸಾ-5 ರವರಿಗೂ ಸುಮಾರು 27-30 ವರ್ಷಗಳಿಂದಲೂ ಪರಿಚಯವಿದೆ. ನಾವು ಗಣೇಶ್ ಹಬ್ಬದ ಪ್ರಯುಕ್ತ ಊರಿಗೆ ಹೋಗುವ ವಿಚಾರವನ್ನು ಚಾಸಾ-5 ರವರಿಗೆ ತಿಳಿಸಿರಲಿಲ್ಲ.

10. ಸಾಮಾನ್ಯವಾಗಿ ಊರಿಗೆ ಹಬ್ಬಕ್ಕೆ ಹೋಗಬೇಕಾದರೆ ಬಂಗಾರದ ಒಡವೆಗಳನ್ನು ತೆಗೆದುಕೊಂಡು ಹೋಗುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಹೇಳುವುದೇನೆಂದರೆ, ಸದರಿ ದಿನ ನನ್ನ ಹೆಂಡತಿ ಬಸ್ ಗೆ ತಡವಾಗುತ್ತದೆಂದು ಬಂಗಾರದ ಆಭರಣಗಳನ್ನು ಮನೆಯಲ್ಲಿ ಬಿಟ್ಟು ಹೋಗಿರುತ್ತಾರೆ. ಸದರಿ ದಿನ ಮನೆಯಲ್ಲಿ ಮಧ್ಯಾಹ್ನ 2.00 ಗಂಟೆಗೆ ಬಿಟ್ಟಿರುತ್ತೇವೆ. ನಿಪಿ–3 ರಲ್ಲಿ ಕಾಣುತ್ತಿರುವ ನಮ್ಮ ಮನೆಯ ಮುಖ್ಯ ದ್ವಾರಕ್ಕೆ ಕಬ್ಬಿಣದ ಸರಳಿನ ಗೇಟನ್ನು ಹಾಕಲಾಗಿರುತ್ತದೆ ಎಂದರೆ ಸರಿ. ಸದರಿ ಗೇಟ್ ಗೆ ಇಂಟರ್ ಲಾಕ್ ನ್ನು ಸಹ ಅಳವಡಿಸಲಾಗಿರುತ್ತದೆ ಎಂದರೆ ಸರಿ. ಸದರಿ ಗೇಟ್ ಗೆ ಒಳಗಿನಿಂದ ಸಹ ಬೀಗ ಹಾಕಲು ಬರುತ್ತದೆ ಎಂದರೆ ಸರಿ. ಸದರಿ ಕಬ್ಬಿಣ ಸರಳಿನ ಗೇಟ್ ಮುರಿದ ಬಗ್ಗೆ ನಿಪಿ–3 ರಲ್ಲಿ ಕಾಣಿಸುತ್ತಿಲ್ಲ ಎಂದರೆ ಸರಿಯಲ್ಲ.ನಮ್ಮ ಮನೆಯ ಕಳ್ಳತನವು ಯಾವ ಸಮಯದಲ್ಲಿ ಆಗಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ದಿನ ನಾವು 4.00 ಗಂಟೆಗೆ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತೇವೆ. ಬೆಳಿಗ್ಗೆ 9.30 ರಿಂದ ಸಂ.4.00 ಗಂಟೆವರೆಗಿನ ಸಮಯದಲ್ಲಿ ದೂರನ್ನು ಕೊಡಲು ಕಾಲಾವಕಾಶ ಇತ್ತು ಎಂದರೆ ಸರಿ. ಸಾಕ್ಷಿ ಸ್ವತಃ ಹೇಳುವುದೇನೆಂದರೆ, ನನ್ನ ಅಣ್ಣನ ಶಿಷ್ಯನೊಬ್ಬ ಪೊಲೀಸ್ ಇದ್ದು, ಆತ ಶ್ವಾನವನ್ನು ಕರೆಸಿ, ಬೆರಳಚ್ಚು ಪ್ರಕ್ರಿಯೆಯನ್ನು ಮಾಡಿಸಿ, ನಂತರ ನಾವು ದೂರು ಕೊಟ್ಟಿರುತ್ತೇವೆ. ಸದರಿ ಪ್ರಕ್ರಿಯೆಯನ್ನು ನಾವು ದೂರನ್ನು ಕೊಡುವ ಮುಂಚೆಯೇ ಜರುಗಿಸಲಾಗಿರುತ್ತದೆ ಎಂದರೆ ಸರಿ. ಸದರಿ ವಿಚಾರವನ್ನು ಹಾಗೂ ಕಳ್ಳನ ಮಾಡಿರುವ ವ್ಯಕ್ತಿಗಳ ಹೆಸರನ್ನು ಬರೆಸಿರುವುದಿಲ್ಲ ಎಂದರೆ ಸರಿ.

11. ನಿಪಿ–2 ರಂತೆ ಪೊಲೀಸರು ನಮ್ಮ ಮನೆಯಲ್ಲಿ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–2 ನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಠಾಣೆಯಲ್ಲಿ ಸೃಷ್ಟಿಸಿದ್ದು, ನಾನು ಪೊಲೀಸರು ಹೇಳಿದ ಮೇರೆಗೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದೂರನ್ನು ಕೊಟ್ಟ ನಂತರ ಪೊಲೀಸರು ವಿಚಾರಣೆಗಾಗಿ ನನ್ನನ್ನು ಕರೆಸಿರುವುದಿಲ್ಲ. ಈ ಪ್ರಕರಣಕ್ಕೂ ಹಾಗೂ 2 ಮತ್ತು 3 ನೇ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತು ಕೇಳಿಕೊಂಡು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ನಾವು ನಮ್ಮ ಗಾಡ್ರೇಜ್ ನಲ್ಲಿ ಇಟ್ಟಿರುವ ಬಂಗಾರದ ಒಡವೆಗಳನ್ನು ಹಾಗೂ ಹಣವನ್ನು ನಮ್ಮ ಜೊತೆ ತೆಗೆದುಕೊಂಡು ಹೋಗಿದ್ದು, ನಾವೇ ಅವುಗಳನ್ನು ಎಲ್ಲಿಯೋ ಕಳೆದುಕೊಂಡು, ಆನಂತರ ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರನ್ನು ಕೊಟ್ಟು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇದೆ.**

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.